†ಶ್ರೀ ಎಚ್. ಎಂ. ಚನ್ನಬಸಪ್ಪ.—1961ನೇ ಇಸವಿಯಿಂದಲೂ ಈ ಬ್ರಿಡ್ಜ್ ಮೇಲೆ ನೀರು ಓವರ್‌ಫ್ಲೋ ಆಗಿದ್ದು, ಡ್ಯಾಮ್‌ನೊಳಗೆ ಎಂಬ್ಯಾಂಕ್‌ಮೆಂಟ್ ಆರ್ಚ ಡ್ಯಾಮೇಜ್ ಆಗಿದೆ. ಈ ಎರಡನ್ನೂ ರಿಪೇರಿ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಿ.—ಇದು ಲಕ್ಷಾಂತರ ಜನ ತಿರುಗಾಡತಕ್ಕ ಸ್ಟೇಟ್ ಫಂಡ್ ರೋಡು, ಮತ್ತು ದೊಡ್ಡ ದೊಡ್ಡ ಭಾರವಾದ ಲಾರಿಗಳು, ಭಾರ ಹೊತ್ತ ಬಸ್ಸುಗಳು ಟ್ರಾಫಿಕ್ ವಿಶೇಷವಾಗಿರುವುದರಿಂದ, ಇದು ಅಪಾಯ ಸ್ಥಿತಿಯಲ್ಲಿರುವುದರಿಂದ, ಜನಗಳು ಭಯ ಪಡುತ್ತಿದ್ದಾರೆ. ತಾವು ಭರವಸಕೊಟ್ಟಿರುವ ರೀತಿಯಲ್ಲಿ ಇದಕ್ಕೆ ಬಜೆಟ್ಟಿನಲ್ಲಿ ಹಣವನ್ನು ಪ್ರೊವೈಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್.ಎಂ. ಚೆನ್ನಬಸಪ್ಪ.—ತಾವು ಇದು ಮುಖ್ಯವಾದ ರಸ್ತೆ ಎನ್ನತಕ್ಕ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ತಾವು ಹೇಳಿದ ರೀತಿಯಲ್ಲಿ ಇಲ್ಲಿ ಅಪಾಯ ಏನೂ ಇಲ್ಲ. ಆದರೆ ಅನಾನು-ಕೂಲ ಇದೆ. ಅಪಾಯಕ್ಕೂ ಅನಾನುಕೂಲಕ್ಕೂ ವ್ಯತ್ಯಾಸ ಇದೆ.

ಶ್ರೀ ಬಿ. ಪುಟ್ಟಸ್ವಾಮಿ.—ಈ ಬ್ರಿಡ್ಜ್ ಸೀಳು ಬಿಟ್ಟಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಪರೀಕ್ಷೆಮಾಡಿಸಿದೆ, ನನಗೆ ಬಂದಿರುವ ವರದಿ ಪ್ರಕಾರ ಇದು 12 ಅಡಿ ಅಗಲ ಇರುವುದರಿಂದ, ದೊಡ್ಡ ದೊಡ್ಡ ಬಸ್ಸುಗಳು, ಲಾರಿಗಳು ಹೋಗುವುದಕ್ಕೆ ಅನಾನುಕೂಲ ಇದೆ. ಒಪ್ಪಿಕೊಳ್ಳುತ್ತೇನೆ. ಆದರೆ ಅಪಾಯ ಮಾತ್ರ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಈಗ ಕುದುರೆ ಮುಖ ಓರ್‌ಗೆ ಈ ರಸ್ತೆ ಸೇರುವುದರಿಂದ ಇದು ಬಹಳ ಪ್ರಮುಖವಾದ ರಸ್ತೆಯಾಗುತ್ತದೆ. ಹೆಚ್ಚಿನ ಭಾರವನ್ನು ಲಾರಿಗಳವರು ಹಾಕಬೇಕಾತ್ತದೆ ಆದ್ದರಿಂದ ಬೇರೆ ಸೇತುವೆಯನ್ನು ಕಟ್ಟಿಸಿಕೊಡಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ.

Lift Irrigation Work at Goundahal, Hyati, Lachankere and Hirebaganahal of Koppal Taluk

376. **Sri M. VIRUPAKSHAPPA** (Koppal).—

Will the Minister for Public Works and Electricity be pleased to state :—

the reasons for the inordinate delay in taking up the Lift Irrigation work at Goundahal, Hyati, Lachankere and Hirebaganahal villages of Koppal Taluk for the benefit of re-settlers from Tungabhadra Project ?

Sri H. M. CHANNABASAPPA (Minister for Public Works and Electricity.—

These Lift Irrigation Schemes are on foreshore of Tungabhadra Reservoir and hence were not taken up so far. It is now proposed to take them subject to availability of funds.

ಶ್ರೀ ಎಂ. ವಿರೂಪಾಕ್ಷಪ್ಪ.—ಯಾತದ ಯೋಜನೆಗಳಿಗೆ ತಗಲತಕ್ಕ ಖರ್ಚು ಕೂಡ ತೀರಾ ಕಡಿಮೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ತೀರಾ ಕಡಿಮೆ ಅಥವಾ ಹೆಚ್ಚು ಎನ್ನತಕ್ಕದು ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಕಡಿಮೆ ಅಥವಾ ಹೆಚ್ಚು ಎಂದು ಹೇಳುವುದು ಕಷ್ಟ.

ಶ್ರೀ ಎಂ. ವಿರೂಪಾಕ್ಷಪ್ಪ.—ಬರಗಾಲ ಪರಿಸ್ಥಿತಿಯನ್ನನ್ನು ನರಿತು ಈ ಯೋಜನೆಗಳನ್ನು ತೀವ್ರ ಕೈಗೆಕೊಳ್ಳುವರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೂರು ನಾಲ್ಕು ಯೋಜನೆಗಳು ಏನು ಹೇಳಿದ್ದಾರೆ ಅವು ಸರ್ಕಾರದಲ್ಲಿನ ಹಣವನ್ನು ಅವಲಂಬಿಸಿದೆಯೇ ಹೊರತು ಯೋಜನೆಗಳನ್ನು ಮಾಡಬಾರದು ಎನ್ನುವ ಪ್ರಶ್ನೆ ಇಲ್ಲ. ಆಭಾವ ಪರಿಸ್ಥಿತಿ ಇರೋದರಿಂದ ಇವುಗಳನ್ನು ನಹಾನುಭೂತಿಯಿಂದ ಪರಿಶೀಲನೆ ಮಾಡಬೇಕು ಎಂಬುದು ಸರ್ಕಾರದ ಮನಸ್ಸಿನಲ್ಲಿದೆ. ಹಣ ಒದಗಿಸಿದ ಕೂಡಲೇ ವ್ಯವಸ್ಥೆ ಮಾಡುತ್ತೇವೆ.

Electrification of Villages in Chikodi Constituency

409. Sri P. P. HEGRE (Chikodi).—

Will the Minister for Public Works and Electricity be pleased to state :—

(*a*) the names of the villages in Chikodi Constituency where electricity has not been supplied ;

(*b*) of them, the names of villages for which estimates in respect of supply of electricity have been prepared ;

(*c*) of them, the number of estimates sanctioned ;

(*d*) the names of villages where the work relating to the supply of electricity has been started ?

Sri H. M. CHANNABASAPPA (Minister for Public Works and Electricity).—

(*a*) *Vide* list appended.

(*b*) (1) Kadapur.
(2) Girgaon.
(3) Jainapur.
(4) Shirgaonwadi.
(5) Yadur.

(*c*) Three in respect of Kadapur, Girgaon and Yadur villages.

(*d*) Work in respect of one village *viz.*, 'Yadur' has been taken up.

List

Showing unelectrified villages in Chikodi Assembly Constituency

1. Chandur
2. Ingali
3. Kerur
4. Jada Kurli
5. Tovarhalli
6. Hottewad
7. Bidrolli
8. Magannur
9. Handinal, K. K
10. Mamadapur
11. Jagunal, K. K.
12. Majalhalli
13. Kajadlhatti
14. Kadapur
15. Girgaon
16. Jainapur
17. Shirgaonwadi
18. Yadur.